


### ಸಾಯಿಬಾಬಾ ಸಮಗ್ರ ಪರಿಚಯ

ಸಾಯಿಬಾಬಾ ಭಕ್ತರಿಗೆ ಮುದ ನೀಡುವ ಜತೆಗೆ ಅವರ ಪವಾಡಗಳನ್ನು ಒರೆಗೆ ಹಚ್ಚುವ ಲೇಖನಗಳನ್ನು (ಎನ್.ಉದಯ ಕುಮಾರ್, ಶಿವರಾಮು ಕಾಡನಕುಪ್ಪೆ, ಬಿ.ಎಂ.ಹನೀಫ್) ಪ್ರಕಟಿಸುವ ಮೂಲಕ 'ಸುಧಾ' ಇತರ ಪತ್ರಿಕೆಗಳಿಗೆ ಮಾದರಿಯಾಗಿದೆ. ಇಂಗ್ಲಿಷ್ ಸೇರಿದಂತೆ ಬಹುತೇಕ ಪತ್ರಿಕೆಗಳು ಸಾಯಿಬಾಬಾರನ್ನು ಹಾಡಿ ಹೊಗಳಿದ್ದರೆ, 'ಸುಧಾ' ಮಾತ್ರ ಬಾಬಾರ ಸಂಕೀರ್ಣ ವ್ಯಕ್ತಿತ್ವವನ್ನು ಕಟ್ಟಿಕೊಟ್ಟಿದೆ.

ಎಸ್.ಲಕ್ಷ್ಮೀನರಸಿಂಹ, ಚಾಮರಾಜ ನಗರ, ಕೋಟೇಶ್ವರ ಸೂರ್ಯನಾರಾಯಣ ರಾವ್, ಜಿ.ಕೆ.ಶ್ರೀಮತಿ, ಬೆಳ್ಳಾವೆ ರಮೇಶ್,ಬೆಂಗಳೂರು, ಎಚ್.ಆನಂದಕುಮಾರ್, ಚಿತ್ರದುರ್ಗ, ಎಂ.ಎಲ್.ಲಕ್ಷ್ಮಣರಾವ್, ರಘುನಾಥರಾವ್ ತಾಪ್ಸೆ, ದಾವಣಗೆರೆ/ ಸು.ವಿಜಯಲಕ್ಷ್ಮಿ, ಶಿವಮೊಗ್ಗ, ಶಂಕರೇಗೌಡ ತುಂಬಕೆರೆ, ಮಂಡ್ಯ, ಮೊಳಕಾಲ್ಮೂರು ಸುರೇಶ್, ಬಳ್ಳಾರಿ

### ಬಾಬಾ ಖಾಸಗಿ ಬದುಕು ಹೇಗಿತ್ತು?

ನನಗೀಗ 76ವರ್ಷ. ಬಾಬಾ ಕುರಿತ ಇನ್ನಷ್ಟು ಮಾಹಿತಿಯನ್ನು ಅಪೇಕ್ಷಿಸುತ್ತಿದ್ದೆ. ಆದರೆ ನಿಮ್ಮ ಲೇಖನದಲ್ಲಿ ಹೆಚ್ಚೇನೂ ಇಲ್ಲ. ವಿಚಾರವಾದದ ಹಿನ್ನೆಲೆಯಲ್ಲಿ 'ಸುಧಾ' ಲೇಖನ ಬರಬಹುದೆಂದು ನಿರೀಕ್ಷಿಸಿದ್ದ ನನಗೆ ನಿರಾಶೆಯಾಗಿದೆ. ಈ ವಯಸ್ಸಲ್ಲೂ ಬಾಬಾ ಕೂದಲೇಕೆ ಕಪ್ಪಾಗಿದೆ? ಅವರ ಖಾಸಗಿ ಬದುಕಿನ ರಹಸ್ಯಗಳೇನು? ಮುಂತಾದ ವಿವರಗಳು ಎಲ್ಲೂ ಸಿಗಲಿಲ್ಲ.

ರಘುರಾಮ್, ಬೆಂಗಳೂರು (ದೂರವಾಣಿ ಕರೆ)

### ವಿಚಾರವಾದಿಗಳ ಗೆಲುವು

'ವೈಚಾರಿಕ ವಲಯ ಮಾಡಿದ ಆರೋಪಗಳಿಗೆ, ಸೇವಾ ಕಾರ್ಯಗಳ ಮೂಲಕ ಉತ್ತರ ನೀಡಿದರು' ಎಂದು ಬರೆದಿದ್ದೀರಿ. ಅಂದರೆ ಸೇವಾ ಕಾರ್ಯ ಮಾಡಲು ಆರೋಪಗಳೇ ಪರೋಕ್ಷವಾಗಿ ಕಾರಣ ಎಂದಾಯಿತಲ್ಲವೆ? ಹಾಗಾದರೆ ಇದು ವಿಚಾರವಾದಿಗಳ ಗೆಲುವು.

ಹುರುಕಡ್ಲಿ ಶಿವಕುಮಾರ, ಬಾಚಿಗೊಂಡನಹಳ್ಳಿ

### ಕೈ ಚಳಕದಿಂದ ಪವಾಡದವರೆಗೆ!

ಸತ್ಯಸಾಯಿಬಾಬ ಅವರು ಬಡವರಿಗೆ ಬೂದಿ, ಉಳ್ಳವರಿಗೆ ಉಂಗುರ ಸೃಷ್ಟಿಸುತ್ತಿದ್ದುದು ಖಂಡಿತ ಪವಾಡವಲ್ಲ, ಕೈಚಳಕ ಮಾತ್ರ. ಆದರೆ ಅದರಿಂದ ಗಳಿಸಿದ ಸಂಪತ್ತನ್ನು ಸದ್ವಿನಿಯೋಗ ಮಾಡುವ ಮೂಲಕ ಪುಟ್ಟಪರ್ತಿಯೆಂಬ ಪುಟ್ಟ ಊರನ್ನು ಅಂತರರಾಷ್ಟ್ರೀಯ ಮಟ್ಟದಲ್ಲಿ ಗುರುತಿಸಲು ಅವರಿಗೆ ಸಾಧ್ಯವಾಗಿತ್ತು.

ಒಂದೂವರೆ ದಶಕದ ಹಿಂದೆ ನಾನು ಹುಬ್ಬಳ್ಳಿಯಿಂದ ಕೇವಲ ಪತ್ರವೊಂದರ ಜೊತೆ ಕಳುಹಿಸಿದ್ದ ಯುವತಿಗೆ ಉಚಿತವಾಗಿ ಹೃದಯ ಶಸ್ತ್ರಚಿಕಿತ್ಸೆ ಮಾಡಿಸಿ ಕಳುಹಿಸಿದ್ದನ್ನು ಒಂದು ಪವಾಡವೆಂದೇ ಭಾವಿಸಿದ್ದೇನೆ!

ಡಾ. ಕೆ.ಕೆ. ಜಯಚಂದ್ರ ಗುಪ್ತ, ಹಾಸನ

### ಹತ್ಯೆ ಯತ್ನ ನಿಗೂಢ

ಸಾಕಷ್ಟು ದುಡ್ಡು ಮಾಡಿರುವ ರಾಜಕಾರಣಿಗಳು ಹಾಗೂ ಅಧಿಕಾರಿಗಳು ಜನಹಿತಕ್ಕೆ ಅದನ್ನು ಬಳಸುವುದಿಲ್ಲ. ಆದರೆ ಬಾಬಾರವರು ಪವಾಡ ಎಂಬ ಭಾವನಾತ್ಮಕ ಬಿಂದಿಗೆ ಬಳಸಿ, ಅದನ್ನು ಸೇವಾ ಕಾರ್ಯಗಳಿಗೆ ಬಳಸಿದ್ದಾರೆ. ಆದರೆ 1993ರಲ್ಲಿ ಅವರ ನಿಕಟವರ್ತಿಗಳೇ ಹತ್ಯೆ ಮಾಡಲು ಯತ್ನಿಸಿದ್ದು ನಿಗೂಢವಾಗೇ ಉಳಿದಿದೆ.

ಸುಧಾ ಮಹೇಶ್, ಹೊಸದುರ್ಗ

### ಮೊದಲು ರೊಕ್ಕ, ನಂತರ ಸೇವೆ!

ಅಕ್ರಮ ಮಾರ್ಗದಿಂದ ಭರ್ಜರಿ ರೊಕ್ಕ ಗಳಿಸಿ, ಸಮಾಜಸೇವೆಗೆ ನಿಂತವರಿದ್ದಾರೆ! ಬಾಬಾ ಮಾಡುತ್ತಿದ್ದ ಪವಾಡಗಳನ್ನು ಅಕ್ರಮ ಎನ್ನಲಾಗದಿದ್ದರೂ, ಅವರ ಸಾವಿನ ಸಂದರ್ಭದಲ್ಲಿ ಬೇಡವೆಂದರೂ ನೆನಪಿಗೆ ಬಂತು.

ಬಸವರಾಜ ದೇಸಾಯಿ, ಧಾರವಾಡ

### ಹೊರಚ್ಚು

'ದೇವಮಾನವ ವರ್ತುಲದಲ್ಲಿ...' ಲೇಖನದಲ್ಲಿ ಶಿವರಾಮು ಕಾಡನಕುಪ್ಪೆಯವರ ಭಿನ್ನಾಭಿಪ್ರಾಯ ಏನೇ ಇರಲಿ, ಆರಂಭದ ಮಾತು– 'ಪುರುಷ ಭಕ್ತರಿಗಿಂತ ಸ್ತ್ರೀ ಭಕ್ತರನ್ನು ವಿಶೇಷವಾಗಿ ಸೆಳೆಯುವ ಮಾತುಗಾರಿಕೆ' –ಅನಗತ್ಯವಾಗಿತ್ತು; ಅದು ಲೇಖಕರ ಆಶಯಕ್ಕೆ ಹೊರಚ್ಚಾಗಿ ನಿಲ್ಲುತ್ತದೆ!

ಸಿಪಿಕೆ, ಮೈಸೂರು

### ಸರಳ ನಿರೂಪಣೆಯ ಕಥೆ

ಬುಳುಸಾಗರ ಪಾಂಡುರಂಗಯ್ಯನವರ ಕಥೆ 'ತೆರೆದ ಬಾಗಿಲು' ವಸ್ತು ಕುತೂಹಲಕಾರಿಯಾಗಿಯೂ, ನಿರೂಪಣೆ ಸರಳವಾಗಿಯೂ ಇತ್ತು.

ಕೊ.ಸು.ನರಸಿಂಹಮೂರ್ತಿ, ಮೈಸೂರು, ಎಂ.ಮಲ್ಲಯ್ಯ, ಶ್ರೀರಾಂಪುರ/ಈಶ್ವರ ಪ್ರಸಾದ್, ದಾವಣಗೆರೆ

### ಮನೋಜ್ಞ ಕಥೆಗಳು

ತಂಬ್ರಹಳ್ಳಿ ರಾಮನಮಲಿಯವರ 'ಬದುಕು ಜಟಕಾ ಬಂಡಿ' ಕಥೆ ಮನೋಜ್ಞವಾಗಿತ್ತು. ಕಳೆದ ವಾರದ ಎರಡೂ ಮಿನಿ ಕಥೆಗಳು ಚೆನ್ನಾಗಿವೆ.

ರಾಜಶೇಖರ ಗೌಡ, ಕೊಟ್ಟೂರು/ ಕೊಹಿಮ, ಬಸರಕೋಡು/ ಬಿ.ಎಸ್.ಮುಳ್ಳೂರ, ಹಲಗತ್ತಿ

### ನಿಜಕ್ಕೂ ವಂಡರ್!

ವಂಡರ್‌ಪುಟದಲ್ಲಿ 18,000 ಜನರನ್ನು ಒಟ್ಟುಗೂಡಿಸಿ ತೆಗೆದ ಫೋಟೊ ಅದ್ಭುತವಾಗಿ ಮೂಡಿಬಂದಿದೆ.

ರವೀಂದ್ರನಾಥ ಶಿ. ಯಡಹಳ್ಳಿ, ಬೀಳಗಿ

### 'ಸುಧಾ' ನನಗೆ ವಿಶ್ವವಿದ್ಯಾಲಯ

ಯಾವುದೇ ವಿಶ್ವವಿದ್ಯಾಲದಲ್ಲಿ ಕಲಿಯುವುದಕ್ಕಿಂತ ಹೆಚ್ಚಿನದನ್ನು ನಾನು 'ಸುಧಾ'ದಲ್ಲಿ ಪ್ರಕಟವಾಗುವ ಬರಹಗಳಿಂದ ಕಲಿತಿದ್ದೇನೆ. ಲೇಖನ, ಕಥೆ, ವಿಚಾರ, ಮಾಹಿತಿ ಎಲ್ಲವೂ ನನಗೆ ಮಾದರಿಯಾಗಿವೆ. ನನ್ನ ಜೀವನವನ್ನು ರೂಪಿಸಿದ ಪತ್ರಿಕೆ ಇದು. ಈಗ 'ಸುಧಾ' ತನ್ನ ಓದುಗರ ಸಂಖ್ಯೆ ಹೆಚ್ಚಿಸಿಕೊಂಡಿರುವುದನ್ನು ನೋಡಿ ಸಂತೋಷವಾಗಿದೆ.

ರಾಜೇಂದ್ರ ಹೆಗಡೆ, ಹಾವೇರಿ


ಉಚಿತ ಹೋಂನರ್ಸಿಂಗ್ ತರಬೇತಿಯೊಂದಿಗೆ ಉತ್ತಮ ಸಂಬಳದಲ್ಲಿ ಕೆಲಸವನ್ನು ನೀಡಲಾಗುತ್ತದೆ.



ಬೆಂಗಳೂರಿನಲ್ಲಿರುವ ಅಡ್ವಾಂಟೇಜ್ ಫೌಂಡೇಶನ್ ಸಂಸ್ಥೆಯ ವತಿಯಿಂದ ಬಡ ಹೆಣ್ಣುಮಕ್ಕಳಿಗೆ ಉಚಿತ ಹೋಂನರ್ಸಿಂಗ್ ತರಬೇತಿಯನ್ನು ನೀಡಲಾಗುತ್ತದೆ. ತರಬೇತಿಯ ನಂತರ ರೂ. 7000 ಸಂಬಳದೊಂದಿಗೆ ಕೆಲಸವನ್ನೂ ನೀಡಲಾಗುತ್ತದೆ. ತರಬೇತಿಯು ಪೂರ್ಣಗೊಂಡ ಬಳಿಕ ಪ್ರಮಾಣಪತ್ರವನ್ನು ನೀಡಲಾಗುತ್ತದೆ. ತರಬೇತಿಯ ಕಾಲಾವಧಿ ಎರಡು ತಿಂಗಳು ಆಗಿರುತ್ತದೆ. ಹಾಸಿಗೆ ಹಿಡಿದು ದೀರ್ಘಕಾಲ ಕಾಯಿಲೆಗಳಿಂದ ಬಳಲುತ್ತಿರುವ ವಯೋವೃದ್ಧರ ವಿಶೇಷ ಆರೈಕೆಯೇ ತರಬೇತಿಯ ವಿಷಯವಾಗಿರುತ್ತದೆ. ಗ್ರಾಮಾಂತರ ಪ್ರದೇಶಗಳಲ್ಲಿನ ಹೆಣ್ಣುಮಕ್ಕಳು ಸಂಸಾರದಲ್ಲಿ ನೊಂದವರಾಗಿದ್ದು ತಮ್ಮ ಬದುಕು ಹಾಗೂ ತಮ್ಮ ಮಕ್ಕಳ ಭವಿಷ್ಯದ ಬಗ್ಗೆ ಆತಂಕರಾಗುತ್ತಾರೆ. ಇಂತಹ ಹೆಣ್ಣುಮಕ್ಕಳಿಗೆ ಉದ್ಯೋಗ ನೀಡಿ ಸ್ವಾವಲಂಬಿಗಳಾಗಿಸುವುದೇ ಸಂಸ್ಥೆಯ ಮುಖ್ಯ ಉದ್ದೇಶ.

ಈಗಾಗಲೇ ಸುಮಾರು 2000ಕ್ಕೂ ಹೆಚ್ಚು ಹೆಣ್ಣುಮಕ್ಕಳು ಈ ತರಬೇತಿಯ ಪ್ರಯೋಜನವನ್ನು ಪಡೆದುಕೊಂಡಿದ್ದಾರೆ.



ತರಬೇತಿಯನ್ನು ಬೆಂಗಳೂರಿನಲ್ಲಿ ನೀಡಲಾಗುತ್ತದೆ ಹಾಗೂ ತರಬೇತಿ ಪಡೆಯುವವರಿಗೆ ಸಂಪೂರ್ಣ ಸುರಕ್ಷೆ ಹಾಗೂ ಸೌಲಭ್ಯಗಳನ್ನು ದೊರಕಿಸಲಾಗುತ್ತದೆ. ತರಬೇತಿಗೆ ದಾಖಲಾಗಲು ಇಚ್ಛಿಸುವ ಅಭ್ಯರ್ಥಿಗಳ ವಯೋಮಿತಿ ಹದಿನೆಂಟರಿಂದ ಮೂವತ್ತೈದು ಹಾಗೂ ಕನಿಷ್ಠ ಹತ್ತನೇ ತರಗತಿಯವರೆಗೆ ವಿದ್ಯಾರ್ಹತೆಯನ್ನು ಹೊಂದಿರಬೇಕು.

ತರಬೇತಿ ಪಡೆಯಲು ಆಸಕ್ತಿ ಇರುವವರು ಸಂಪರ್ಕಿಸಬೇಕಾದ ವಿಳಾಸ

ಅಡ್ವಾಂಟೇಜ್ ಸೀನಿಯರ್ಸ್ ಫೌಂಡೇಶನ್

# 216, 6ನೇ ಕ್ರಾಸ್, 1ನೇ ಹಂತ, ಇಂದಿರಾನಗರ, ಬೆಂಗಳೂರು–38.

ದೂರವಾಣಿ- ಸೌಮ್ಯನಾಯರ್

9844495527 / 9164818894